KAUP320009932024

# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ, ಕುಂದಾಪುರ

**ಉಪಸ್ಥಿತರುಃ ಶ್ರೀಮತಿ. ಮಂಜುಳ ಬಿ.,**
ಬಿ.ಎ.ಎಲ್., ಎಲ್.ಎಲ್.ಬಿ.,
**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಕುಂದಾಪುರ.**

**ದಿನಾಂಕ 5ನೇ ಜೂನ್, 2026**

**ಸಿ.ಸಿ. ಸಂಖ್ಯೆ 346/2024**
**(ಹಳೆಯ ಸಿ.ಸಿ. ನಂ. 1355/2016)**

**ಪಿರ್ಯಾದುದಾರರುಃ** ಕರ್ನಾಟಕ ಸರ್ಕಾರ ಪರವಾಗಿ
ಶಂಕರನಾರಾಯಣ ಪೊಲೀಸ್ ಠಾಣೆ
**(ಸಹಾಯಕ ಸರ್ಕಾರಿ ಅಭಿಯೋಜಕರು)**

**::ವಿರುದ್ಧ::**

**ಆರೋಪಿತರುಃ**
1) ವಾಸುದೇವ,
ಬಿನ್ ಗಣಪ,
ವಿಳಾಸಃ ಬೆಳ್ಳಾಲ, ಮುದೂರ್ ಗ್ರಾಮ,
ಕುಂದಾಪುರ ತಾಲೂಕು, ಉಡುಪಿ.

2) ಶಾಂತ,
ಬಿನ್ ವಾಸುದೇವ,
ವಿಳಾಸಃ ಬೆಳ್ಳಾಲ, ಮುದೂರ್ ಗ್ರಾಮ,
ಕುಂದಾಪುರ ತಾಲೂಕು, ಉಡುಪಿ.

**(ಶ್ರೀ ಯು.ಆರ್.ಎಸ್. ವಕೀಲರು)**

| | |
|---|---|
| ಅಪರಾಧ ಸಂಖ್ಯೆ | 205/2015 |
| ಘಟನೆ ನಡೆದ ದಿನಾಂಕ | 14/10/2015 |
| ಪ್ರಕರಣ ದಾಖಲಾದ ದಿನಾಂಕ | 14/10/2015 |

| | |
|---|---|
| ಪಿರ್ಯಾದಿಯ ಹೆಸರು | ಶ್ರೀಮತಿ ವಲ್ಲಿಯಮ್ಮ |
| ಸಾಕ್ಷ್ಯಗಳ ವಿಚಾರಣೆ ಪ್ರಾರಂಭವಾದ ದಿನಾಂಕ | 15/06/2024 |
| ಸಾಕ್ಷ್ಯಗಳ ವಿಚಾರಣೆ ಮುಕ್ತಾಯವಾದ ದಿನಾಂಕ | 24/03/2026 |
| ಆಪಾದನೆ ಕಲಂ ಗಳು | ಭಾ.ದಂ.ಸಂ.ಕಲಂ 447, 323, 506 ಸಹವಾಚಕ ಕಲಂ 34 ಐ.ಪಿ.ಸಿ. |
| ನ್ಯಾಯಾಧೀಶರ ಅಭಿಪ್ರಾಯ | ದೋಷಾರೋಪಣೆ ಸಾಬೀತಾಗಿರುವುದಿಲ್ಲ |
| ಆದೇಶ | ನಿರ್ದೂಷಿ |

MANJULA BETTASWAMY Digitally signed by MANJULA BETTASWAMY Date: 2026.06.05 16:36:28 +0530

**(ಮಂಜುಳ. ಬಿ.)**
**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ,**
**ಕುಂದಾಪುರ.**

# ತೀರ್ಪು

ಪೊಲೀಸ್ ಉಪ-ನಿರೀಕ್ಷಕರು, ಶಂಕರನಾರಾಯಣ ಪೊಲೀಸ್ ಠಾಣೆ, ಶಂಕರನಾರಾಯಣ, ಉಡುಪಿ ಜಿಲ್ಲೆ ಇವರು 1 ಮತ್ತು 2ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 323, 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾದಗಳಿಗಾಗಿ ಠಾಣಾ ಗುನ್ನಾ ಸಂಖ್ಯೆ 205/2015ರಲ್ಲಿ ಸಲ್ಲಿಸಿರುವ ದೋಷಾರೋಪಣ ಪಟ್ಟಿಯ ಆಧಾರದ ಮೇಲೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2) ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ದಿನಾಂಕ 14/10/2015 ರಂದು ಮದ್ಯಾಹ್ನ 14.30 ಗಂಟೆ ಸಮಯದಲ್ಲಿ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ

ಕುಂದಾಪುರ ತಾಲೂಕು, ಹೆಂಗವಳ್ಳಿ ಗ್ರಾಮದ, ಹತ್ತಾರಜೆಡ್ಡು ಎಂಬಲ್ಲಿ ಚಾಸಾ-4/ಶ್ರೀಮತಿ ಶುಭಾಷಿರವರಿಗೆ ಸೇರಿದ ವಾಸ್ತವ್ಯದ ಮನೆ ನಂಬ್ರ 1-238ಬಿಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿ ಚಾಸಾ-1/ಶ್ರೀಮತಿ ವಲ್ಲಿಯಮ್ಮರವರಲ್ಲಿ "ನನ್ನ ಅತ್ತೆಗೆ ಯಾಕೇ ಬೈಯ್ಯುತ್ತೀಯಾ ಕಿರಕುಳ ನೀಡುತ್ತೀಯಾ" ಎಂದು ಕೇಳಿ ಒಂದೇ ಸಮನೇ ಜೋರು ಮಾಡಿ, ಕುತ್ತಿಗೆಯನ್ನು ಒತ್ತಿ ಹಿಡಿದು ಕೈಯಿಂದ ಹಲ್ಲೆ ಮಾಡಿ ನೀವು ಇನ್ನು ಮುಂದೆ ಸುಬ್ಬು ಪೂಜಾರ್ತಿ ಇವರ ಸುದ್ದಿಗೆ ಹೋದರೆ ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆಂದು, ಈ ಘಟನೆಗೆ ಚಾಸಾ-4/ಶ್ರೀಮತಿ ಶುಭಾಷಿ ಮತ್ತು ಆರೋಪಿತರ ಸಂಬಂಧಿ ಸುಬ್ಬು ಪೂಜಾರ್ತಿ ಇವರಿಗೆ ಇರುವ ಜಾಗದ ತಕರಾರೇ ಕಾರಣವಾಗಿರುತ್ತದೆಂಬುದಾಗಿರುತ್ತದೆ.

3) ದಿನಾಂಕ 14/10/2015ರಂದು ಸಮಯ 06:00 ಗಂಟೆಗೆ ಚಾಸಾ-11 ರವರು ಚಾಸಾ-1 ರವರು ಮನೆಯಲ್ಲಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ 06:30 ಗಂಟೆಗೆ ಠಾಣೆಗೆ ಬಂದು ಠಾಣಾ ಮೊಕದಮ್ಮೆ ಸಂಖ್ಯೆ 205/2015ರಂತೆ ಪ್ರಕರಣವನ್ನು ದಾಖಲಿಸಿಕೊಂಡು, ದಿನಾಂಕ 20/10/2015ರಂದು ಸಮಯ ಸಂಜೆ 03:00 ರಿಂದ 03:45 ಗಂಟೆಯವರೆಗೆ ಚಾಸಾ-2 ಮತ್ತು 7 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-2ರಂತೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ಆರೋಪಿತರನ್ನು ಬಂಧಿಸಿ ಸೂಕ್ತ ಜಾಮೀನಿನ ಆಧಾರದ ಮೇಲೆ ಬಿಡುಗಡೆ ಮಾಡಿರುತ್ತಾರೆ ಎಂಬುದಾಗಿರುತ್ತದೆ.

4) ತನಿಖಾಧಿಕಾರಿಯು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ ಮೇರೆಗೆ ಸದರಿ

ಅಪರಾಧಗಳ ಮೇಲೆ ಸಾಂಜ್ಞೆಯನ್ನು ತೆಗೆದುಕೊಂಡು 1 ಮತ್ತು 2ನೇ ಆರೋಪಿತರ ವಿರುದ್ದ 3ನೇ ರಿಜಿಸ್ಟರದಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿರುತ್ತದೆ. 1 ಮತ್ತು 2ನೇ ಆರೋಪಿತರು ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್‌ಗೆ ಉತ್ತರವಾಗಿ 1 ಮತ್ತು 2 ರವರು ನ್ಯಾಯಾಲಯದ ಮುಂದೆ ಬಂದು ಹಾಜರಾಗಿ ಜಾಮೀನು ಪಡೆದಿರುತ್ತಾರೆ. 1 ಮತ್ತು 2ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರಲ್ಲಿ ತಿಳಿಸಿರುವಂತೆ ದೋಷಾರೋಪಣೆ ಪತ್ರದ ನಕಲುಗಳನ್ನು ಪೂರೈಸಲಾಗಿರುತ್ತದೆ.

5) ಆರೋಪಿತರ ಪರ ಹಾಗೂ ಅಭಿಯೋಜನೆಯವರ ವಾದವನ್ನು ಕೇಳಿ, ಆರೋಪಿ 1 ಮತ್ತು 2ರವರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ರಚಿಸಿ ಅದನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಕೇಳಿದಾಗ ಅದನ್ನು ತಿಳಿದುಕೊಂಡು 1 ಮತ್ತು 2ನೇ ಆರೋಪಿತರು ತಾವು ಅಪರಾಧ ಮಾಡಿಲ್ಲಾ ವಿಚಾರಣೆಯಾಗಬೇಕು ಎಂದು ಕೇಳಿಕೊಂಡಿರುತ್ತಾರೆ. ತದನಂತರದಲ್ಲಿ ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ಉಡುಪಿ ರವರ ಸುತ್ತೋಲೆ ಸಂಖ್ಯೆ 2/2024ರ ದಿನಾಂಕ 23/04/2024 ಮತ್ತು ಪತ್ರ ಸಂಖ್ಯೆ 1748/2024ರ ದಿನಾಂಕ 25/04/2024ರಂತೆ, ದಿನಾಂಕ 04/06/2024ರಂದು ಸದರಿ ಪ್ರಕರಣವನ್ನು ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕರಿಯವರ ನ್ಯಾಯಾಲಯಕ್ಕೆ ವರ್ಗಾಯಿಸಿದ್ದ ಮೇರೆಗೆ ಸಿ.ಸಿ. ನಂ.346/2024.

6) ಅಭಿಯೋಜನೆಯವರು ಆರೋಪಿತರ ವಿರುದ್ದ ಮಾಡಿದ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಒಟ್ಟು 11 ಜನ ಸಾಕ್ಷಿದಾರರುಗಳಲ್ಲಿ 10 ಜನ ಸಾಕ್ಷಿದಾರರುಗಳನ್ನು ಪ್ರಾಸಾ-1 ರಿಂದ ಪ್ರಾಸಾ-10 ಎಂದು ವಿಚಾರಣೆಗೊಳಪಡಿಸಿ ಅವರುಗಳ ಕಡೆಯಿಂದ ಒಟ್ಟು 8 ದಾಖಲೆಗಳನ್ನು ನಿಪಿ-1 ರಿಂದ ನಿಪಿ-8 ಅಂತ ಗುರುತಿಸಿಕೊಂಡಿರುತ್ತಾರೆ. ವಿಚಾರಣ ಹಂತದಲ್ಲಿ ಚಾಸಾ-3 ರವರಿಗೆ ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್ ಮೃತಪಟ್ಟಿರುತ್ತಾರೆಂಬ ಹಿಂಬರಹದೊಂದಿಗೆ ಮರಣ ಪತ್ರಗಳೊಂದಿಗೆ ಹಿಂದಿರುಗಿದ್ದರಿಂದ ಸದರಿ ಚಾಸಾ-3 ರವರನ್ನು ಪ್ರಕರಣದಿಂದ ಕೈ ಬಿಡಲಾಗಿರುತ್ತದೆ.

7) ವಿಚಾರಣೆ ಮುಗಿದ ನಂತರ 1 ಮತ್ತು 2ನೇ ಆರೋಪಿತರ ವಿರುದ್ದ ದಂಡ ಪ್ರಕ್ರಿಯ ಸಂಹಿತೆ ಕಲಂ 313ರಡಿಯಲ್ಲಿನ ಆರೋಪಿತರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. 1 ಮತ್ತು 2ನೇ ಆರೋಪಿತರು ತಮ್ಮ ಪ್ರತಿರಕ್ಷೆಯಲ್ಲಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

8) ಅಪರಾಧಿಕ ದಂಡ ಪ್ರಕ್ರಿಯಾ ಸಂಹಿತೆ 437(ಎ)ರಡಿಯಲ್ಲಿ ಆರೋಪಿತರಿಗೆ ಜಾಮೀನು ತೆಗೆದುಕೊಳ್ಳಲಾಗಿರುತ್ತದೆ.

9) ಉಭಯತ್ರರರ ವಾದ-ವಿವಾದಗಳನ್ನು ಕೇಳಿ ಕಡತವನ್ನು ಪರಿಶೀಲಿಸಿದಾಗ, ಈ ಕೆಳಗಿನ ಅಂಶಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸುತ್ತವೆ.

**ಅಂಶಗಳು**

1) ಅಭಿಯೋಜನಾ ಪಕ್ಷದವರು, ದಿನಾಂಕ 14/10/2015 ರಂದು ಮದ್ಯಾಹ್ನ 14.30 ಗಂಟೆ ಸಮಯದಲ್ಲಿ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕುಂದಾಪುರ ತಾಲೂಕು, ಹೆಂಗವಳ್ಳಿ ಗ್ರಾಮದ, ಹತ್ತಾರಜೆಡ್ಡು ಎಂಬಲ್ಲಿ ಚಾಸಾ-4/ಶ್ರೀಮತಿ ಶುಭಾಷಿರವರಿಗೆ ಸೇರಿದ ವಾಸ್ತವ್ಯದ ಮನೆ ನಂಬ್ರ 1-238ಬಿಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿರುತ್ತಾರೆಂದು, ಆ ಮೂಲಕ 1 ಮತ್ತು 2ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿದ್ದಾರೆಂದು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

2) ಎರಡನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ, 1 ಮತ್ತು 2ನೇ ಆರೋಪಿತರು ತಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಚಾಸಾ-1/ಶ್ರೀಮತಿ ವಲ್ಲಿಯಮ್ಮರವರಲ್ಲಿ "ನನ್ನ ಅತ್ತೆಗೆ ಯಾಕೇ ಬೈಯ್ಯುತ್ತೀಯಾ ಕಿರಕುಳ ನೀಡುತ್ತೀಯಾ" ಎಂದು ಕೇಳಿ ಒಂದೇ ಸಮನೇ ಜೋರು ಮಾಡಿ, ಕುತ್ತಿಗೆಯನ್ನು ಒತ್ತಿ ಹಿಡಿದು ಕೈಯಿಂದ ಹಲ್ಲೆ ಮಾಡಿರುತ್ತಾರೆಂದು, ಆ ಮೂಲಕ 1 ಮತ್ತು 2ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿದ್ದಾರೆಂದು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

3) ಮೂರನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ, 1 ಮತ್ತು 2ನೇ ಆರೋಪಿತರು ತಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ನೀವು ಇನ್ನು ಮುಂದೆ ಸುಬ್ಬು ಪೂಜಾರ್ತಿ ಇವರ ಸುದ್ದಿಗೆ ಹೋದರೆ ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆಂದು, ಆ ಮೂಲಕ 1 ಮತ್ತು

2ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿದ್ದಾರೆಂದು ಸಂಶಯಾತೀತವಾಗಿ ಸಾಭೀತುಪಡಿಸಿದ್ದಾರೆಯೇ?

4) ಯಾವ ಆದೇಶ?

10) ಅಭಿಯೋಜನಾ ಪಕ್ಷದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು 1 ಮತ್ತು 2ನೇ ಆರೋಪಿತರ ಪರ ವಕೀಲರ ವಾದವನ್ನು ಆಲಿಸಿ, ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆಃ

ಅಂಶ ಸಂಖ್ಯೆ 1 ರಿಂದ 3: ನಕಾರಾತ್ಮಕವಾಗಿದೆ
ಅಂಶ ಸಂಖ್ಯೆ 4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಂತೆ ಇರುತ್ತದೆ.

## ಕಾರಣಗಳು

**11) ಅಂಶ ಸಂಖ್ಯೆ. 1 ರಿಂದ 3:** ಈ ಮೂರು ಅಂಶಗಳು ಒಂದೇ ಘಟನೆಗೆ ಸಂಬಂಧಪಟ್ಟಿದ್ದು, ಒಂದಕ್ಕೊಂದು ಸಂಬಂಧ ಪಟ್ಟಿರುವುದರಿಂದ ಅನೂಕೂಲತೆಯ ದೃಷ್ಟಿಯಿಂದ ಹಾಗೂ ಘಟನೆಯ ಪುನರಾವರ್ತೆಯನ್ನು ತಪ್ಪಿಸುವ ಸಲುವಾಗಿ ಸದರಿ ಈ ಮೂರು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12) ಅಭಿಯೋಜನೆ ಪ್ರಕರಣದಂತೆ ದಿನಾಂಕ 14/10/2015 ರಂದು ಮದ್ಯಾಹ್ನ 14.30 ಗಂಟೆ ಸಮಯದಲ್ಲಿ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕುಂದಾಪುರ ತಾಲೂಕು, ಹೆಂಗವಳ್ಳಿ ಗ್ರಾಮದ, ಹತ್ತಾರಜೆಡ್ಡು ಎಂಬಲ್ಲಿ ಚಾಸಾ-4/ಶ್ರೀಮತಿ ಶುಭಾಷಿರವರಿಗೆ ಸೇರಿದ ವಾಸ್ತವ್ಯದ ಮನೆ ನಂಬ್ರ 1-238ಬಿಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡಿ ಚಾಸಾ-1/ಶ್ರೀಮತಿ ವಲ್ಲಿಯಮ್ಮರವರಲ್ಲಿ "ನನ್ನ ಅತ್ತೆಗೆ ಯಾಕೇ ಬೈಯ್ಯುತ್ತೀಯಾ ಕಿರುಕುಳ ನೀಡುತ್ತೀಯಾ" ಎಂದು ಕೇಳಿ ಒಂದೇ ಸಮನೇ ಜೋರು ಮಾಡಿ, ಕುತ್ತಿಗೆಯನ್ನು ಒತ್ತಿ ಹಿಡಿದು ಕೈಯಿಂದ ಹಲ್ಲೆ ಮಾಡಿ ನೀವು ಇನ್ನು ಮುಂದೆ ಸುಬ್ಬು ಪೂಜಾರ್ತಿ ಇವರ ಸುದ್ದಿಗೆ ಹೋದರೆ ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆಂದು, ಈ ಘಟನೆಗೆ ಚಾಸಾ-4/ಶ್ರೀಮತಿ ಶುಭಾಷಿ ಮತ್ತು ಆರೋಪಿತರ ಸಂಬಂಧಿ ಸುಬ್ಬು ಪೂಜಾರ್ತಿ ಇವರಿಗೆ ಇರುವ ಜಾಗದ ತಕರಾರೇ ಕಾರಣವಾಗಿರುತ್ತದೆಂಬುದಾಗಿರುತ್ತದೆ.

13) ಈ ನಿಟ್ಟಿನಲ್ಲಿ ಅಭಿಯೋಜನೆಯ ಪರ ಪ್ರಾಸಾ-1 ಎಂದು ಸಾಕ್ಷ್ಯಾ ನುಡಿದ ಪಿರ್ಯಾದಿ ತನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ-1/ಪ್ರಥಮ ಮಾಹಿತಿ ಮತ್ತು ನಿಪಿ-2/ಘಟನಾ ಸ್ಥಳದ ಪಂಚನಾಮೆಗಳಲ್ಲಿನ ತನ್ನ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-2(ಎ) ಅಂತ ಗುರುತಿಸಿ ಆರೋಪಿತರು ಮನೆಗೆ ಬಂದು ಕೈಗೆಲ್ಲಾ ಹೊಡೆದು ದೂಡಿ ಹಾಕಿರುತ್ತಾರೆಂದು ಅಭಿಯೋಜನಾ ಪರ ಭಾಗಶಃ ಸಾಕ್ಷ್ಯ ನುಡಿದಿದ್ದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿನಲ್ಲಿಯೂ ಸಹ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಂದು ಸಾಕ್ಷ್ಯ ನುಡಿದಿದ್ದರೂ ಸಹ ಆರೋಪಿತರು ಅತಿಕ್ರಮ ಪ್ರವೇಶ ಮಾಡಿದ ಬಗ್ಗೆಯಾಗಲೀ, ಆರೋಪಿತರು ಆಡಿದ ಆವಾಚ್ಯ

ಶಬ್ದಗಳ ಬಗ್ಗೆಯಾಗಲೀ ಸಾಕ್ಷ್ಯ ನುಡಿಯದೇ ಅಭಿಯೋಜನಾ ಪ್ರಕರಣವನ್ನು ಭಾಗಶಃ ಬೆಂಬಲಿಸಿರುತ್ತಾರೆ.

14) ಇನ್ನು ಪ್ರತ್ಯಕ್ಷ ಸಾಕ್ಷಿದಾರ ವಾ ಘಟನಾ ಸ್ಥಳದ ಪಂಚನಾಮೆಯ ಪಾಂಚ ಎಂದು ವಿಚಾರಣೆಗೊಳಪಟ್ಟ ಪ್ರಾಸಾ-3ರವರು ಪ್ರಕರಣದ ಬಗ್ಗೆ ಸಾಕ್ಷ್ಯ ನುಡಿಯದೇ ನಿಪಿ-2/ಘಟನಾ ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಿದ್ದರೂ ಸಹ ಆರೋಪಿತ ಜಗಳವಾಡುತ್ತಿದ್ದ. ನಾನು ರಸ್ತೆ ಬದಿಯಲ್ಲಿ ನಿಂತು ನೋಡಿ ಬಂದಿರುತ್ತೇನೆಂದು ನುಡಿದು ಅಭಿಯೋಜನಾ ಪ್ರಕರಣವನ್ನು ಭಾಗಶಃ ಬೆಂಬಲಿಸಿದ್ದು, ಕೇವಲ ಘಟನಾ ಸ್ಥಳದಲ್ಲಿ 1ನೇ ಆರೋಪಿತ ಇದ್ದನೆಂತಲೂ, ಯಾರ ಯಾರ ನಡುವೆ ಗಲಾಟೆಯಾಯಿತು ಯಾರು ಯಾರಿಗೆ ಬೈದು ಹೊಡೆದರು ಎಂಬುದರ ಬಗ್ಗೆ ಸಾಕ್ಷಿ ನುಡಿದಿರುವುದಿಲ್ಲ ಹಾಗೂ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿನಲ್ಲಿಯೂ ಸಹ ಸುಮಾರು 2.30 ಗಂಟೆಗೆ ಕೂಗಾಡುವ ಶಬ್ದ ಕೇಳಿರುತ್ತದೆ. ನಾನು ಕುತ್ತಿಗೆ ಒತ್ತಿ ಹಿಡಿದಿದ್ದನ್ನು, ಜೀವ ಬೆದರಿಕೆ ಹಾಕಿದ್ದನ್ನು ಹಾಗೂ ಹಲ್ಲೆ ಮಾಡಿದ ಬಗ್ಗೆ ಪೋಲಿಸರಿಗೆ ನಿಪಿ-4 ರಂತೆ ಹೇಳಿಕೆ ನೀಡಿರುತ್ತೇನೆಂಬ ವಿಚಾರವನ್ನು ಸುಳ್ಳು ಎಂದು ಅಲ್ಲಗಳೆದು ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ.

15) ಅದೇ ರೀತಿ ನಿಪಿ2/ಘಟನಾ ಸ್ಥಳದ ಪಂಚನಾಮೆಯ ಮತ್ತೋರ್ವ ಸಾಕ್ಷಿದಾರ ಎಂದು ವಿಚಾರಣೆಗೊಳಪಟ್ಟ ಪ್ರಾಸಾ-6ರವರು ನಿಪಿ-2ಕ್ಕೆ ನಿಪಿ-2(ಸಿ) ಯಂತೆ ಸಹಿ ಮಾಡಿರುತ್ತೇನೆ ಅಂತ ಒಪ್ಪಿಕೊಂಡಿದ್ದರೂ ಸಹ ಪೋಲಿಸರು ಬಂದು ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿರುತ್ತೇನೆಂದು ನುಡಿದು ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿದಿರುತ್ತಾರೆ.

16) ಇನ್ನು ಈ ಪ್ರಕರಣದ ವಿಚಾರ ಕೇಳಿ ಗೊತ್ತಾದ ಸಾಕ್ಷಿದಾರರು ಎನ್ನಲಾದ ಪ್ರಾಸಾ-2, ಪ್ರಾಸಾ-4 ಮತ್ತು ಪ್ರಾಸಾ-5 ರವರಲ್ಲಿ ಪ್ರಾಸಾ-2, ಪ್ರಾಸಾ-5 ಮತ್ತು ಪ್ರಾಸಾ-4 ರವರು ಪ್ರಾಸಾ-1ರವರ ಮೊಮ್ಮಕ್ಕಳು ಹಾಗೂ ಮಗಳಾಗಿದ್ದು, ಪ್ರಾಸಾ-2 ಮತ್ತು ಪ್ರಾಸಾ-4 ರವರು ಪ್ರಾಸಾ-1 ರವರಿಂದ ಕೇಳಿ ಗೊತ್ತಾದಂತೆ ಆರೋಪಿತರು ಕೋಲಿನಿಂದ ಹಲ್ಲೆ ಮಾಡಿರುತ್ತಾರೆಂಬುದಾಗಿದ್ದು ಆದರೆ ಪ್ರಾಸಾ-1 ಕೋಲಿನಲ್ಲಿ ಹಲ್ಲೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ಹೀಗೆ ಪ್ರಾಸಾ-1, 2, 4 ಮತ್ತು 5ರವರ ಸಾಕ್ಷ್ಯವು ಹಲ್ಲೆ ಮಾಡಿರುವ ಬಗ್ಗೆ ಒಂದಕ್ಕೊಂದು ತದ್ವಿರುದ್ಧತೆಯಿಂದ ಕೂಡಿರುತ್ತವೆ. ಪ್ರಾಸಾ-2 ಮತ್ತು ಪ್ರಾಸಾ-4 ರವರು ಆರೋಪಿತರು ಮನೆಗೆ ಅಕ್ರಮ ಪ್ರವೇಶ ಮಾಡಿದ್ದಾಗಲೀ, ಯಾವ ಯಾವ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂಬುದರ ಬಗ್ಗೆಯಾಗಲೀ ಸಾಕ್ಷಿ ನುಡಿದಿರುವುದಿಲ್ಲ. ಅದೇ ರೀತಿ ಪ್ರಾಸಾ-5ರವರು ಸಹ ಗಲಾಟೆಯಾದ ವಿಚಾರ ಪ್ರಾಸಾ-1 ನನಗೆ ತಿಳಿಸಿರುತ್ತಾರೆ. ವಾಸುದೇವರವರು ನನ್ನ ಅಜ್ಜಿ/ ಪ್ರಾಸಾ-1ರವರಿಗೆ ಹೊಡೆದಿರುತ್ತಾರೆಂಬ ವಿಚಾರವನ್ನು ಪ್ರಾಸಾ-1ರವರು ತನಗೆ ತಿಳಿಸಿರುತ್ತಾರೆಂದು ಆ ಸಮಯದಲ್ಲಿ ಕೇವಲ ತನ್ನ ಅಜ್ಜಿ ಮಾತ್ರ ಮನೆಯಲ್ಲಿದ್ದರೆಂಬುದಾಗಿ ತಿಳಿಸಿದ್ದು ಇದಕ್ಕೆ ವ್ಯತಿರಿಕ್ತವಂತೆ ಪ್ರಾಸಾ-4ರವರು 2ನೇ ಆರೋಪಿತಳು ಪ್ರಾಸಾ-1 ರವರಿಗೆ ದೊಣ್ಣೆಯಲ್ಲಿ ಹೊಡೆದಿರುತ್ತಾರೆಂದು ಅಭಿಯೋಜನೆ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿದಿರುತ್ತಾರೆ.

17) ಹೀಗೆ ವಿಚಾರಣೆಗೊಳಪಟ್ಟ ಸಾಕ್ಷಿದಾರರು ಒಬ್ಬರಿಗೊಬ್ಬರು ಅಭಿಯೋಜನೆ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದು ಪ್ರಾಸಾ-2 ರವರು ಘಟನೆಯಾದ ನಂತರ ಪ್ರಾಸಾ-1, ಶಂಕರ ಪೂಜಾರಿರವರ ದಿನಸಿ ಅಂಗಡಿಯಿಂದ ತನಗೆ ಕಾಲ್ ಮಾಡಿದ್ದು ಆ ಸಮಯದಲ್ಲಿ ದಿನಸಿ ಅಂಗಡಿಯ ಹತ್ತಿರ ಸುಮಾರು

ಜನರು ಸೇರಿದ್ದರೆಂದು ತಿಳಿಸಿದ್ದು, ಘಟನಾ ಸ್ಥಳದಲ್ಲಿ ನೆರದಿದ್ದಂತಹ ಯಾವುದೇ ಸ್ವತಂತ್ರ ಪ್ರತ್ಯಕ್ಷ ಸಾಕ್ಷಿದಾರರನ್ನು ಈ ಪ್ರಕರಣದಲ್ಲಿ ವಿಚಾರಣೆಗೊಳಪಡಿಸದೇ ಇರುವುದರಿಂದ ಪ್ರಾಸಾ-1ರವರ ಸಾಕ್ಷ್ಯವನ್ನು ಅತೀ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದ್ದು ಈ ನಿಟ್ಟಿನಲ್ಲಿ ಪ್ರಾಸಾ-1ರವರ ಹೇಳಿಕೆಗೆ ಪೂರಕವೆಂಬಂತೆ ಆಭಿಯೋಜನೆಯವರು ಹಾಜರುಪಡಿಸಿದಂತಹ ನಿಪಿ-5ರ ಗಾಯದ ಪ್ರಮಾಣ ಪತ್ರವನ್ನು ನೋಡಲಾಗಿ ಸದರಿ ಗಾಯದ ಪ್ರಮಾಣ ಪತ್ರದಲ್ಲಿ 5*1 ಆಳದ ಸೆಂಟಿ ಮೀಟರ್ ನ ಜಜ್ಜು ಗಾಯ ಎಡ ಕೈಯ ಮುಂದೋಳಿನಲ್ಲಿ ಆಗಿದ್ದೆಂದು ನಮೂದಿಸಲಾಗಿರುವುದು ಸರಿಯಷ್ಟೇ. ಆದರೆ ಪ್ರಾಸಾ-1 ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಕುತ್ತಿಗೆ ಎಳೆದು ಕೈಗೆಲ್ಲಾ ಹೊಡೆದು ದೂಡಿರುತ್ತಾರೆಂದು ಸಾಕ್ಷ್ಯ ನುಡಿದಿದ್ದು ಸದರಿ ಜಜ್ಜು ಗಾಯ ಗಲಾಟೆಯ ಪರಿಣಾಮ ಸಂಭವಿಸಿರುತ್ತದೆಂಬುದರ ಬಗ್ಗೆಯಾಗಲೀ ಹಾಗೂ ಗಾಯದ ವಯಸ್ಸನ್ನು ನಮೂದಿಸದೇ ಇರುವುದರಿಂದ ಹಾಗೂ ಹಲ್ಲೆ ಮಾಡಿದ ಬಗ್ಗೆ ಪ್ರಾಸಾ-1, 2, 4 ಮತ್ತು 5 ರವರ ಹೇಳಿಕೆಗಳು ಒಂದಕ್ಕೊಂದು ತದ್ವಿರುದ್ಧತೆಯಿಂದ ಕೂಡಿರುವುದರಿಂದ ನಿಪಿ-1ರಲ್ಲಿ ನಮೂದಿಸಿದ ಗಾಯ ಈ ಘಟನೆಯಿಂದಲೇ ಸಂಭವಿಸಿದೆ ಎಂದು ಹೇಳಲು ಸಾದ್ಯವಿರುವುದಿಲ್ಲ. ಅಲ್ಲದೇ ಪ್ರಾಸಾ-1ರವರ ಪ್ರಕಾರ ಪ್ರಾಸಾ-4 ರವರು ವಾಸವಿರುವ ಜಮೀನು ಮೂಲತಃ ಸುಬ್ಬು ಪೂಜಾರ್ತಿರವರಿಗೆ ಸಂಬಂದಿಸಿದ್ದೆಂದು ಹೇಳಿದ್ದು ಈ ವಿಚಾರವಾಗಿ ಸಿವಿಲ್ ವ್ಯಾಜ್ಯ ಇರುತ್ತದೆಂದು ಹೇಳಿರುವುದನ್ನು ಗಮನಿಸಿದರೆ ಮೇಲ್ನೋಟಕ್ಕೆ ಸಿವಿಲ್ ವ್ಯಾಜ್ಯವಿರುವುದರಿಂದ ಈ ಪ್ರಕರಣವನ್ನು ದಾಖಲಿಸಿರುತ್ತಾರೆಂದು ಕಂಡುಬಂದಿದ್ದು, ಅಭಿಯೋಜನೆಯವರು ದೋಷಾರೋಪಣ ಪಟ್ಟಿಯಲ್ಲಿ ತಿಳಿಸಿದಂತೆ 1 ಮತ್ತು 2ನೇ ಆರೋಪಿತರುಗಳ ಮೇಲಿನ ಆರೋಪವನ್ನು

ಸಾಬೀತುಪಡಿಸಲು ಸಂಪೂರ್ಣ ವಿಫಲರಾಗಿರುವ ಕಾರಣ, ಅಂಶ ಸಂಖ್ಯೆ 1 ರಿಂದ 3ನ್ನು ನಕಾರತ್ಮಕವಾಗಿ ಉತ್ತರಿಸಲಾಗಿದೆ.

18) **ಅಂಶ ಸಂಖ್ಯೆ 4:**- ಅಂಶ 1 ರಿಂದ 3ರಲ್ಲಿ ಹೇಳಲಾದ ಕಾರಣಗಳಿಂದಾಗಿ 1 ಮತ್ತು 2ನೇ ಆರೋಪಿತರ ವಿರುದ್ದ ಹೊರಸಿಲಾದ ಆರೋಪವನ್ನು ಅಭಿಯೋಜನೆಯವರು ಸಂಶಯತೀತವಾಗಿ ಸಾಭೀತುಪಡಿಸಲು ವಿಫಲರಾಗಿರುವ ಕಾರಣ 1 ಮತ್ತು 2ನೇ ಆರೋಪಿತರನ್ನು ದೋಷಮುಕ್ತ ಎಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ, 1973 ಕಲಂ 248(1) ರಡಿಯಲ್ಲಿ 1 ಮತ್ತು 2ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 447, 323, 506 ಸಹವಾಚಕ ಕಲಂ 34ರ ಅಪಾದನೆಗಳಿಂದ ದೋಷಮುಕ್ತಗೊಳಿಸಿ ಕುಲಾಸೆ ಮಾಡಲಾಗಿದೆ.

ಆರೋಪಿತರು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರ ಈ ತೀರ್ಪು ನೀಡಿದ ದಿನಾಂಕದಿಂದ 6 ತಿಂಗಳ ನಂತರ ರದ್ದಾಗತಕ್ಕದ್ದು ಎಂದು ಆದೇಶಿಸಲಾಗಿದೆ.

**(ಈ ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ನೀಡಿ, ನಂತರ ಓದಿ, ತಪ್ಪುಗಳನ್ನು ತಿದ್ದಿ ರುಜುವಿನೊಂದಿಗೆ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 5 ನೇ ಜೂನ್, 2026 ರಂದು ಘೋಷಿಸಲ್ಪಟ್ಟಿತು)**

MANJULA BETTASWAMY
Digitally signed by MANJULA BETTASWAMY
Date: 2026.06.05 16:36:41 +0530

**(ಮಂಜುಳ. ಬಿ.)**
**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ,**
**ಕುಂದಾಪುರ.**

# ಅನುಬಂಧ

**<u>ಅಭಿಯೋಜಕರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ :</u>**

ಪ್ರಾಸಾ-1) ವಲ್ಲಿಯಮ್ಮ
ಪ್ರಾಸಾ-2) ಮನು
ಪ್ರಾಸಾ-3) ದಿನೇಶ ಮಡಿವಾಳ
ಪ್ರಾಸಾ-4) ಸುಭಾಷಿಣಿ
ಪ್ರಾಸಾ-5) ಮಹೇಶ್
ಪ್ರಾಸಾ-6) ಬಸವ ಶೆಟ್ಟಿ
ಪ್ರಾಸಾ-7) ಡಾ. ಸವಿತಾ ಎನ್
ಪ್ರಾಸಾ-8) ಅಶೋಕ್ ಕುಮಾರ್ ಶೆಟ್ಟಿ
ಪ್ರಾಸಾ-9) ಡಾ. ಸುಧಾಕರ ಟಿ
ಪ್ರಾಸಾ-10) ದೇಜಪ್ಪ

**ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ :**

ನಿಪಿ-1 : ಪಿರ್ಯಾದು
ನಿಪಿ-1(ಎ) : ಪ್ರಾಸಾ-1ರವರ ಸಹಿ
ನಿಪಿ-1(ಬಿ) : ಪ್ರಾಸಾ-2 ರವರ ಸಹಿ
ನಿಪಿ-1(ಸಿ) : ಪ್ರಾಸಾ-10 ರವರ ಸಹಿ
ನಿಪಿ-2 : ಸ್ಥಳ ಮಹಜರ್
ನಿಪಿ-2(ಎ) : ಪ್ರಾಸಾ-1ರವರ ಸಹಿ
ನಿಪಿ-2(ಬಿ) : ಪ್ರಾಸಾ-3ರವರ ಸಹಿ
ನಿಪಿ-2(ಸಿ) : ಪ್ರಾಸಾ-6ರವರ ಸಹಿ
ನಿಪಿ-2(ಡಿ) : ಪ್ರಾಸಾ-10ರವರ ಸಹಿ
ನಿಪಿ-3 : ಪ್ರಾಸಾ-1 ರವರ ಹೇಳಿಕೆಯ ಭಾಗ
ನಿಪಿ-4 : ಪ್ರಾಸಾ-3ರವರ ಹೇಳಿಕೆ
ನಿಪಿ-5 : ಗಾಯದ ಪ್ರಮಾಣ ಪತ್ರ
ನಿಪಿ-5(ಎ) : ಪ್ರಾಸಾ-7ರವರ ಸಹಿ
ನಿಪಿ-5(ಬಿ) : ಪ್ರಾಸಾ-10ರವರ ಸಹಿ
ನಿಪಿ-6 : ದೃಡೀಕರಣ ಪತ್ರ

ನಿಪಿ-6(ಎ) : ಪ್ರಾಸಾ-8ರವರ ಸಹಿ
ನಿಪಿ-6(ಬಿ) : ಪ್ರಾಸಾ-10ರವರ ಸಹಿ
ನಿಪಿ-7 : ಗಾಯದ ಪ್ರಮಾಣ ಪತ್ರ
ನಿಪಿ-7(ಎ) : ಪ್ರಾಸಾ-9ರವರ ಸಹಿ
ನಿಪಿ-8 : ಪ್ರಥಮ ವರ್ತಮಾನ ವರದಿ
ನಿಪಿ-8(ಎ) : ಪ್ರಾಸಾ-10ರವರ ಸಹಿ

**ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ಮುದ್ದೆ ಮಾಲುಗಳ ವಿವರ:**

ಇಲ್ಲಾ

**ಆರೋಪಿತರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ :**

ಇಲ್ಲಾ

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ :**

ಇಲ್ಲಾ

MANJULA BETTASWAMY Digitally signed by MANJULA BETTASWAMY Date: 2026.06.05 16:36:35 +0530

**(ಮಂಜುಳ. ಬಿ.)**
**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ,**
**ಕುಂದಾಪುರ.**